<u>ದಿನಾಂಕಃ **04-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಐ ಕೆ ರವರಿಂದಃ</u>

1. ಕಳೆದ 10-12 ವರ್ಷಗಳ ಹಿಂದಿನಿಂದಲೂ ಆರೋಪಿ ನನಗೆ ಪರಿಚಯವಿರುತ್ತಾನೆ. ನನಗೆ ಸೇರಿದ ವಿನಾಯಕ ಮೆಡಿಕಲ್ ಸ್ಟೋರ್ ಇರುತ್ತದೆ ಎಂದರೆ ಸರಿ. ಆರೋಪಿ ಹೋಲ್ ಸೇಲ್ ಡಿಸ್ಟ್ರಿಬ್ಯೂಟರ್ ಎಂದರೆ ಸರಿ. ಆರೋಪಿಯ ಉಮಾ ಮೆಡಿಕಲ್ ಡಿಸ್ಟ್ರಿಬ್ಯೂಟರ್ ಕಡೆಯಿಂದ ನಮ್ಮ ಔಷಧಿ ಅಂಗಡಿಗೆ ಬೇಕಾದ ಔಷಧಿ ಮತ್ತು ಮಾತ್ರೆಗಳನ್ನು ಖರೀದಿಸುತಿದ್ದೆನು ಎಂದರೆ ಸರಿ. ನಾನು ನಗದಾಗಿ ಆರೋಪಿಗೆ ಹಣ ಪಾವತಿ ಮಾಡುತಿದ್ದೆ. 10-12 ವರ್ಷಗಳ ಹಿಂದೆ ಆರೋಪಿಗೆ ಸೇರಿದ ಉಮಾ ಮೆಡಿಕಲ್ ಏಜೆಂನ್ಸಿ ಇದು ಗೋಕಾಕಿನ ಉಳಿದ ಮೆಡಿಕಲ್ ಶಾಪುಗಳಿಗೆ ಔಷದಿ ಮತ್ತು ಮಾತ್ರೆಗಳನ್ನು ಹೋಲ್ ಸೇಲ್ ಡಿಸ್ಟ್ರಿಬ್ಯೂಟ್ ಮಾಡುತಿತ್ತು ಎಂದರೆ ಸರಿ.

2. ನಾನು ನನ್ನ ವೈಯಕ್ತಿಕ ಬ್ಯಾಂಕ್ ವ್ಯವಹಾರಗಳನ್ನು ಕೆನರಾ ಬ್ಯಾಂಕ್ ಮುಖಾಂತರ ಮಾಡುತ್ತೇನೆ. ನನ್ನ ಮೆಡಿಕಲ್ ಸ್ಟೋರಿನ ಬ್ಯಾಂಕ್ ವ್ಯವಹಾರಗಳನ್ನು ಗೋಕಾಕ ಅರ್ಬನ್ ಬ್ಯಾಂಕ್ ಮುಖಾಂತರ ಮಾಡುತ್ತೇನೆ. ಆರೋಪಿಗೆ ನಾನು ಅನೇಕ ಸಲ ಕೈಗಡ ರೂಪದಲ್ಲಿ ಹಣ ನೀಡಿರುತ್ತೇನೆ. ದೂರು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ದೂರಿನಲ್ಲಿ ಆರೋಪಿ ನನ್ನಿಂದ ಅನೇಕ ಸಲ ಕೈಗಡ ಹಣ ಪಡೆದಿರುತ್ತಾನೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ.

3. ನಾನು ನನ್ನ ದೂರಿನಲ್ಲಿ ಆರೋಪಿಗೆ ರೂ.13 ಲಕ್ಷ ನೀಡಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆರೋಪಿ ನನಗೆ 2017 ನೇ ಸಾಲಿನ ಜನವರಿ ತಿಂಗಳ ಮೊದಲ ವಾರದಲ್ಲಿ ಔಷಧಿ ವ್ಯವಹಾರವನ್ನು ಅಭಿವೃದ್ದಿಪಡಿಸುವ ಸಲುವಾಗಿ ಹಣ ಕೇಳಿರುತ್ತಾನೆ. ನಾನು ನೀಡಿದ ರೂ.13 ಲಕ್ಷ ಹಣ ಸಾಲದ ರೂಪದಲ್ಲಿ ನೀಡಿದ ಹಣ ಅಲ್ಲ ಎಂದರೆ ಸರಿ. ಸದರಿ ಹಣವನ್ನು ನಾನು ಇನ್ವೆಸ್ಟ್ ಮಾಡಲು ನೀಡಿರುತ್ತೇನೆ ಎಂದರೆ ಸರಿ. ಆರೋಪಿಗೆ ನಾನು ಇನ್ವೆಸ್ಟ್ ಮಾಡಲು ನೀಡಿದ ರೂ.13 ಲಕ್ಷ ಹಣದಲ್ಲಿ ಆದಾಯಬಂದ 40 % ಲಾಭವನ್ನು ನನಗೆ ಕೊಡಲು ಒಪ್ಪಂದ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ಒಪ್ಪಂದ ಪತ್ರ ನಿಪಿ-6 ಎಂದರೆ ಸರಿ. ನಿಪಿ-6 ರಲ್ಲಿ ಇರುವ ಸಹಿ ನನ್ನದೇ ಎಂದರೆ ಸರಿ. ನಿಪಿ-6 ರಲ್ಲಿ ಬರೆದ ನಿಬಂಧನೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ನಿಬಂಧನೆಗಳು ಸತ್ಯವಾಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಸದರಿ ನಿಬಂಧನೆಗಳನ್ನು ಬರೆಯಲು ಆರೋಪಿ ಮಾಹಿತಿ ನೀಡಿರುತ್ತಾನೆ ಎಂದು ನುಡಿಯುತ್ತಾರೆ.

4. ರೂ.500 ಮತ್ತು ರೂ.1,000/- ಮುಖಬೆಲೆಯ ನೋಟುಗಳು 2016 ನೇ ಸಾಲಿನಲ್ಲಿ ಅಮಾನ್ಯಗೊಂಡಾದ ನಂತರ ನಾನು ಆರೋಪಿಗೆ ಹಣ ಕೊಡಲು ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.13 ಲಕ್ಷ ಹಣವನ್ನು ಚೆಕ್ಕುಗಳ ಮುಖಾಂತರ ನೀಡಿರುತ್ತೇನೆ. ದಿಃ 23-01-2017 ರಂದು ರೂ.2 ಲಕ್ಷ ಚೆಕ್ಕಿನ ಮುಖಾಂತರ, ದಿಃ 04-02-2017 ರಂದು ರೂ.6 ಲಕ್ಷ ಚೆಕ್ಕಿನ ಮುಖಾಂತರ, ದಿಃ 14-02-2017 ರಂದು ರೂ.3 ಲಕ್ಷ ಚೆಕ್ಕಿನ ಮುಖಾಂತರ ಹಾಗೂ ದಿಃ 21-02-2017 ರಂದು ರೂ.2 ಲಕ್ಷ ಚೆಕ್ಕಿನ ಮುಖಾಂತರ ಆರೋಪಿಗೆ ನೀಡಿರುತ್ತೇನೆ. ದಿಃ 28-03-2017 ರಂದು ನನ್ನ ಮತ್ತು ಆರೋಪಿಯ ಮಧ್ಯೆ ನಿಪಿ-6 ರ ಕರಾರು ಪತ್ರವಾಗಿರುತ್ತದೆ. ಆರೋಪಿಗೆ ನಾನು ಚೆಕ್ಕುಗಳ ಮುಖಾಂತರ

ನೀಡಿದ ಹಣದಂದೆ ನಿಪಿ-6ರ ದಾಖಲೆ ಏಕೆ ಮಾಡಿಕೊಂಡಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿ ತನಗೆ ಸಮಯವಿಲ್ಲ ಎಂದು ತಿಳಿಸಿದ್ದಕ್ಕಾಗಿ ಮಾರ್ಚ್ ತಿಂಗಳಿನಲ್ಲಿ ನಿಪಿ-6ರ ದಾಖಲೆ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಚೆಕ್ಕುಗಳ ಮುಖಾಂತರ ಹಣ ನೀಡಿದ್ದು ಕೆನರಾ ಬ್ಯಾಂಕಿನ ಚೆಕ್ಕುಗಳ ಮುಖಾಂತರ ಎಂದರೆ ಸರಿ. ನಾನು ಆರೋಪಿಗೆ ಚೆಕ್ಕುಗಳ ಮುಖಾಂತರ ಹಣ ನೀಡಿದಾಗ ಆ ಸಮಯದಲ್ಲಿ ಆರೋಪಿಗೆ ಸೇರಿದ ಅರ್ಬನ್ ಬ್ಯಾಂಕ್ ಗೋಕಾಕ ಶಾಖೆಯಲ್ಲಿ ಯಾವುದೇ ಖಾತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ಅರ್ಬನ್ ಬ್ಯಾಂಕ್ ಗೋಕಾಕ ಶಾಖೆಯಲ್ಲಿ ನನಗೆ ಸೇರಿದ ಖಾತೆ ಇತ್ತು ಎಂದರೆ ಸರಿ. ಅರ್ಬನ್ ಬ್ಯಾಂಕ್ ಗೋಕಾಕ ಶಾಖೆಯಲ್ಲಿ ಆರೋಪಿಯ ಖಾತೆಯನ್ನು ನಾನೇ ಇಂಟ್ರೊಡ್ಯೂಸರ್ ಆಗಿ ಖಾತೆ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನೋಟು ಅಮಾನ್ಯಗೊಂಡಾದ ನಂತರ ನನ್ನ ಕಪ್ಪು ಹಣವನ್ನು ಕಾಯ್ದೇಶಿರಿ ಹಣ ಮಾಡಿಕೊಳ್ಳಲು ಆರೋಪಿಗೆ ಚೆಕ್ ಮುಖಾಂತರ ಹಣ ನೀಡಿದ್ದೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಚೆಕ್ ಮುಖಾಂತರ ನೀಡಿದ ರೂ.13 ಲಕ್ಷ ಹಣವನ್ನು ನನ್ನ ಆದಾಯ ತೆರಿಗೆ ಘೋಷಣೆಯಲ್ಲಿ ತೋರಿಸಿರುತ್ತೇನೆ. ಸದರಿ ಆದಾ ಯ ತೆರಿಗೆ ಘೋಷಣಾ ಪತ್ರವನ್ನು ನಾನು ಈ ಕೇಸಿನಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಆದಾಯ ತೆರಿಗೆ ಘೋಷಣಾ ಪತ್ರವನ್ನು ಹಾಜರುಪಡಿಸು ಎಂದರೆ ಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.